group - C
NON - Tech

ಈ ಪ್ರಶ್ನೆಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು.

ವಿಷಯ ಸಂಕೇತ **69**

**2015**

# ಪ್ರಶ್ನೆಪುಸ್ತಿಕೆ
# ಸಾಮಾನ್ಯ ಜ್ಞಾನ

ಪ್ರಶ್ನೆಪುಸ್ತಿಕೆ ವರ್ಷನ್ ಕೋಡ್ **A**

ಗರಿಷ್ಠ ಸಮಯ : (1½) ಒಂದೂವರೆ ಗಂಟೆಗಳು

ಗರಿಷ್ಠ ಅಂಕಗಳು : 100

## ಸೂಚನೆಗಳು

1. OMR ಉತ್ತರ ಹಾಳೆಯಲ್ಲಿ ಪ್ರಶ್ನೆ ಪತ್ರಿಕೆ ಶ್ರೇಣಿಯನ್ನು ಎನ್ ಕೋಡ್ ಮಾಡುವ ಮೊದಲು ಪರೀಕ್ಷೆ ಪ್ರಾರಂಭಗೊಂಡ ತಕ್ಷಣವೇ ಈ ಪ್ರಶ್ನೆ ಪುಸ್ತಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಯಾವುದೇ ಪುಟ ಇಲ್ಲದಿರುವ ಅಥವಾ ಮುದ್ರಿತವಾಗದ ಪ್ರಶ್ನೆಗಳು ಇತ್ಯಾದಿ ಒಳಗೊಂಡಿಲ್ಲವೆಂಬುದನ್ನು ನೀವು ಪರೀಕ್ಷಿಸತಕ್ಕದ್ದು. ಮೇಲಿನ ಯಾವುದೇ ದೋಷ ಕಂಡುಬಂದಲ್ಲಿ ಅದನ್ನು ಹಿಂತಿರುಗಿಸಿ ಲಭ್ಯವಿರುವ ಪರಿಪೂರ್ಣವಾದ ಬೇರೆ ಪ್ರಶ್ನೆ ಪುಸ್ತಿಕೆಯನ್ನು ಪಡೆಯತಕ್ಕದ್ದು.
2. ಪ್ರಶ್ನೆ ಪುಸ್ತಿಕೆಯ ವರ್ಷನ್ ಕೋಡ್ A, B, C, D ಅನ್ನು OMR ಉತ್ತರ ಪತ್ರಿಕೆಯಲ್ಲಿ ಅದಕ್ಕಾಗಿ ಒದಗಿಸಲಾಗಿರುವ ಸ್ಥಳದಲ್ಲಿ ಬರೆದು ಸಂಕೇತ (ಎನ್ ಕೋಡ್) ಗೊಳಿಸಬೇಕು.
3. ಪಕ್ಕದಲ್ಲಿ ಒದಗಿಸಿರುವ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

ನೊಂದಣಿ ಸಂಖ್ಯೆ: 2072236

4. ಈ ಪ್ರಶ್ನೆ ಪುಸ್ತಿಕೆ 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು 4 ಉತ್ತರಗಳನ್ನು ಒಳಗೊಂಡಿರುತ್ತದೆ. ನೀವು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ, ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಉತ್ತರ ಪತ್ರಿಕೆಯ ಮೇಲೆ ಕೇವಲ ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ ಗುರುತು ಮಾಡಬೇಕು. ಉತ್ತರ ಪತ್ರಿಕೆ ಹಾಳೆಯಲ್ಲಿನ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿರಿ. ನೀವು ಗಳಿಸುವ ಒಟ್ಟಾರೆ ಅಂಕಗಳು ನೀವು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡುವ ಸರಿಯಾದ ಉತ್ತರಗಳ ಸಂಖ್ಯೆಯನ್ನು ಮಾತ್ರ ಆಧರಿಸಿರುತ್ತದೆ.
7. ಉತ್ತರ ಪತ್ರಿಕೆಯಲ್ಲಿ ಉತ್ತರಗಳನ್ನು ಗುರುತಿಸಲು ಪ್ರಾರಂಭಿಸುವ ಮೊದಲು ನೋಂದಣಿ ಸಂಖ್ಯೆ, ಪ್ರಶ್ನೆ ಪುಸ್ತಿಕೆಯ ವರ್ಷನ್ ಕೋಡ್ ಇತ್ಯಾದಿಗಳನ್ನು (ನಿಮ್ಮ ಸಹಿ ಹಾಗೂ ಸಂವೀಕ್ಷಕರ ಸಹಿಯೊಂದಿಗೆ) ನಿಗದಿಪಡಿಸಿರುವ ಸ್ಥಳದಲ್ಲಿ ಭರ್ತಿ/ಗುರುತು ಮಾಡಿರಿ.
8. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
9. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಉತ್ತರ ಪತ್ರಿಕೆಯ ಹಾಳೆಯಲ್ಲಿ ಇನ್ನಾವುದೇ ಗುರುತುಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಉತ್ತರ ಪತ್ರಿಕೆಯ ಹಾಳೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.
10. ಪ್ರಶ್ನೆಗಳು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿರುತ್ತವೆ. ಕನ್ನಡ ಪ್ರಶ್ನೆಗಳಲ್ಲಿ ಸಂದೇಹ ಉಂಟಾದರೆ, ದಯವಿಟ್ಟು ಆಂಗ್ಲ ಭಾಷೆಯ ಪ್ರಶ್ನೆಗಳನ್ನು ಗಮನಿಸುವುದು.
11. ಯಾವುದೇ ರೀತಿಯ ಕ್ಯಾಲ್‌ಕ್ಯುಲೇಟರ್‌ಗಳನ್ನು ಬಳಸಲು ಅನುಮತಿ ಇಲ್ಲ.
12. ಉತ್ತರ ಪತ್ರಿಕೆಯಲ್ಲಿ ಕಂಡು ಬರುವ ಬಾರ್‌ಕೋಡ್‌ಗಳ ಮೇಲೆ ಯಾವುದೇ ಗುರುತು ಮಾಡತಕ್ಕದ್ದಲ್ಲ.

ಈ ಪ್ರಶ್ನೆಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು.

*Note : English version of the instructions is printed on the back cover of this booklet.*



www.kpscvaani.com

Scanned by CamScanner

1. ಈ ಕೆಳಕಂಡದರಲ್ಲಿ ಯಾವುದು ಜೈವಿಕ ಗೋಳದ ಭಾಗವಾಗಿದೆ ?

(1) ವಾತಾವರಣ (2) ಶಿಲಾಗೋಳ
(3) ಜಲಾಗೋಳ (4) ಎಲ್ಲವೂ

2. ಪ್ರಸ್ತುತ ಭಾರತದ ಅರಣ್ಯದ ವಿಸ್ತೀರ್ಣದ ಪ್ರಮಾಣ ಸುಮಾರು

(1) 21 % (2) 25 %
(3) 27 % (4) 30 %

3. ಸೌರಶಕ್ತಿಯು

(1) ನವೀಕರಿಸಬಲ್ಲ ಶಕ್ತಿ
(2) ನವೀಕರಿಸಲಾಗದ ಶಕ್ತಿ
(3) ರಾಸಾಯನಿಕ ಶಕ್ತಿ
(4) ಕೈನೆಟಿಕ್ ಶಕ್ತಿ

4. ಕಯೋಟೊ ಪ್ರೊಟೊಕಾಲ್ ಹವಾಮಾನ ಬದಲಾವಣೆ ಪರಿಯಾಯದ ಒಂದು ಮೈಲಿಗಲ್ಲು ಏಕೆಂದರೆ

(1) ಇದು ಹವಾಮಾನ ಬದಲಾವಣೆ ನಿಯಂತ್ರಿಸಲು ತೆಗೆದುಕೊಂಡ ಮೊದಲ ಹೆಜ್ಜೆ
(2) ಇದು ಬಹು ರಾಷ್ಟ್ರಗಳು ಒಪ್ಪಿಕೊಂಡ ಸಂಧಿ
(3) ಇದು ಇಂಗಾಲದ ವ್ಯಾಪಾರಕ್ಕೆ ಅಣುವು ಮಾಡಿಕೊಟ್ಟಿತು
(4) ಇದು ಮುಂದುವರಿದ ರಾಷ್ಟ್ರಗಳಿಂದ ತಿರಸ್ಕರಿಸಲ್ಪಟಿತು

5. ಈ ಭೂಮಿಯ ಮುಖ್ಯ ಶಕ್ತಿಯ ಮೂಲ

(1) ಪೆಟ್ರೋಲ್
(2) ಅಣುಶಕ್ತಿ
(3) ಸೌರ ಶಕ್ತಿ
(4) ಪಳೆಯುಳಿಕೆ ಇಂದನ

6. ಜಾಗತೀಕ ಉಷ್ಣತೆ ಹೆಚ್ಚುತ್ತಿರುವುದರಿಂದ ಆಗುವ ಪರಿಣಾಮ ಏನು ?

(1) ಉಷ್ಣತೆಯಲ್ಲಿ ಏರಿಕೆ
(2) ಹಿಮ ಕರಗುವಿಕೆ
(3) ಸಮುದ್ರದ ಎತ್ತರದಲ್ಲಿ ಏರಿಕೆ
(4) ಈ ಮೇಲಿನ ಎಲ್ಲವೂ

7. X ವಸ್ತುವಿನ ಬೆಲೆಯಲ್ಲಾದ ಏರಿಕೆಯಿಂದ Y ವಸ್ತುವಿನ ಬೇಡಿಕೆಯಲ್ಲಿ ಏರಿಕೆಯು ಉಂಟಾಗುತ್ತದೆ. ಆದ್ದರಿಂದ

(1) X ಮತ್ತು Y ವಸ್ತುಗಳು ತಟಸ್ಥ ವಸ್ತುಗಳು
(2) X ಮತ್ತು Y ವಸ್ತುಗಳು ಪೂರಕ ವಸ್ತುಗಳು
(3) X ಮತ್ತು Y ವಸ್ತುಗಳು ಬದಲಿ ವಸ್ತುಗಳು
(4) X ಮತ್ತು Y ವಸ್ತುಗಳು ಕೆಳದರ್ಜೆ ವಸ್ತುಗಳು

8. ವೈಯಕ್ತಿಕ ಆದಾಯ ತೆರಿಗೆಯಿಂದ ಸಂಗ್ರಹವಾದ ಒಟ್ಟು ಆದಾಯವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಹೇಗೆ ಹಂಚಬೇಕೆಂದು ಯಾರು ನಿರ್ಧರಿಸುತ್ತಾರೆ ?

(1) ರಾಜ್ಯ ಯೋಜನಾ ಆಯೋಗ
(2) ಹಣಕಾಸಿನ ಆಯೋಗ
(3) ರಾಷ್ಟ್ರೀಯ ಯೋಜನಾ ಆಯೋಗ
(4) ಎಲ್ಲ ಮೂರೂ ಆಯೋಗಗಳು



www.kpscvaani.com
Scanned by CamScanner

9. ಅಲ್ಪಾವಧಿ ಕೃಷಿ ಸಹಕಾರಿ ಬ್ಯಾಂಕುಗಳಿಗೆ ಮೇಲ್ಮಟ್ಟದಲ್ಲಿರುವ (ಅಪೆಕ್ಸ್) ಬ್ಯಾಂಕು ಯಾವುದು ?

(1) ರಾಜ್ಯ ಸಹಕಾರಿ ಬ್ಯಾಂಕು

(2) ಕೇಂದ್ರ ಸಹಕಾರಿ ಬ್ಯಾಂಕು

(3) ಭಾರತೀಯ ಸ್ಟೇಟ್ ಬ್ಯಾಂಕು

(4) ಭೂ ಅಭಿವೃದ್ಧಿ ಬ್ಯಾಂಕು

10. ಇವುಗಳಲ್ಲಿ ಯಾವುದು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಒಂದು ಲಕ್ಷಣ ?

(1) ಈ ಬ್ಯಾಂಕನ್ನು ರಿಜರ್ವ್ ಬ್ಯಾಂಕು ಪ್ರಾಯೋಜಿಸುತ್ತದೆ.

(2) ಇದು ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಪುನರ್ಧನ ಸೌಲಭ್ಯವನ್ನು ನೀಡುತ್ತದೆ.

(3) ಇದು ನಗರಗಳಿಗೆ ಸೀಮಿತವಾದ ಬ್ಯಾಂಕು.

(4) ಇದು ಬಡರೈತರು ಹಾಗೂ ಹಿಂದುಳಿದ ಮತ್ತು ಗುಡ್ಡಗಾಡು ಪ್ರದೇಶದ ಕರಕುಶಲ ಕಾರ್ಮಿಕರಿಗೆ ನೇರವಾಗಿ ಸಾಲವನ್ನು ನೀಡುತ್ತದೆ.

11. ಕೆಳಗಿನವುಗಳಲ್ಲಿ ಯಾವುದು ಸೆಬಿ (SEBI) ಯ ಕಾರ್ಯವಾಗಿದೆ ?

(1) ಭದ್ರತಾ ಪತ್ರಗಳಲ್ಲಿ ಒಳವ್ಯಾಪಾರ ವನ್ನು ನಿರ್ಬಂಧಿಸುವುದು

(2) ಸ್ವಯಂ ನಿಯಂತ್ರಿತ ಸಂಘಟನೆಗಳನ್ನು ನಿಯಂತ್ರಿಸುವುದು ಹಾಗೂ ಪ್ರೊತ್ಸಾಹಿಸುವುದು

(3) ಶೇರುಪೇಟೆಯ ವ್ಯವಹಾರವನ್ನು ನಿಯಂತ್ರಿಸುವುದು

(4) ಮೇಲಿನ ಎಲ್ಲವೂ

12. ಭೂಗರ್ಭ ಜಲವಿದ್ಯುತ್ ಉತ್ಪಾದನಾ ಕೇಂದ್ರವಾದ ವಾರಾಹಿ ಭೂಗರ್ಭ ಯೋಜನೆ ಯಾವ ಜಿಲ್ಲೆಯಲ್ಲಿದೆ ?

(1) ಶಿವಮೊಗ್ಗ

(2) ಚಿಕ್ಕಮಗಳೂರು

(3) ಮಂಡ್ಯ

(4) ಮಂಗಳೂರು

13. ಕರ್ನಾಟಕದಲ್ಲೇ ಪ್ರಥಮವಾಗಿ 1932 ರಲ್ಲಿ ವಿಮಾನ ಸಂಪರ್ಕ ಪಡೆದ ಊರು ಯಾವುದು ?

(1) ಬೆಂಗಳೂರು

(2) ಮೈಸೂರು

(3) ಬಳ್ಳಾರಿ

(4) ಬೆಳಗಾಂ

14. 'ಪಾವರ್ಟಿ ಅಂಡ್ ಅನ್‌ಬ್ರಿಟೀಷ್ ರೂಲ್ ಇನ್ ಇಂಡಿಯಾ ಕೃತಿ' ಯನ್ನು ಬರೆದವರು

(1) ದಾದಾಬಾಯಿ ನವರೋಜಿ

(2) ಮೋತಿಲಾಲ್ ನೆಹರೂ

(3) ಮಹಾತ್ಮಾ ಗಾಂಧಿ

(4) ಗೋಪಾಲಕೃಷ್ಣ ಗೋಖಲೆ

15. 'ಬಾಲ ಬಂಧು ಸಮಾಜ' ವನ್ನು ಸಂಘಟಿಸಿದವರು

(1) ಕೃಷ್ಣರಾವ್ ಹಳದಿಪುರಕರ್

(2) ಎಸ್.ಎನ್. ಹರ್ಡಿಕರ್

(3) ಗಿರಿಭಟ್ಟ ನರಸಿಂಹಾಚಾರ್

(4) ಎಮ್. ವೆಂಕಟರಮಣಯ್ಯ



www.kpscvaani.com

Scanned by CamScanner

16. ಹುಚ್ಚು ನಾಯಿ ರೋಗ (ರೇಬಿಸ್) ದ ವಿರುದ್ಧ ಲಸಿಕೆ ಕಂಡು ಹಿಡಿದ ಪ್ರಖ್ಯಾತ ವಿಜ್ಞಾನಿ

(1) ಎಡ್‌ವರ್ಡ್ ಜೆನ್ನರ್
(2) ಲೂಯಿಸ್ ಪ್ಯಾಶ್ಚರ್
57
(3) ಗೆಲಿಲಿಯೋ
(4) ಸರ್. ಸಿ.ವಿ. ರಾಮನ್

17. ಭಾರತದ ಕ್ಷೀರ ಕ್ರಾಂತಿಯ ಜನಕ

(1) ಡಾ. ವರ್ಗೀಸ್ ಕುರಿಯನ್
53 (2) ನಾರ್‌ಮನ್ ಬೋರ್‌ಲಾಗ್
(3) ಅಮರ್ತ್ಯ ಸೇನ್
(4) ಜಗದೀಶ್ ಚಂದ್ರ ಬೋಸ್

18. ಪ್ರಪಂಚದಲ್ಲಿ ಅತಿ ಹೆಚ್ಚು ಹಾಲು ಉತ್ಪಾದಿಸುವ ದೇಶ
54.
(1) ಭಾರತ (2) ಅಮೇರಿಕ(USA)
(3) ಬ್ರೆಜಿಲ್ (4) ಚೈನಾ

19. ದನ ಮತ್ತು ಎಮ್ಮೆಗಳಲ್ಲಿ ಕಂಡು ಬರುವ ಕಾಲು ಬಾಯಿ ಜ್ವರ ರೋಗಕ್ಕೆ ಕಾರಣ

(1) ಅಣು ಜೀವಿ
55. (2) ಸೂಕ್ಷ್ಮಾಣು ಜೀವಿ
(3) ಪರೋಪ ಜೀವಿ (ಪ್ರೋಟೋಜೋವ)
(4) ಬೂಸ್ಟು (ಮೌಲ್ಡ್ಸ್)

20. ದನ ಮತ್ತು ಎಮ್ಮೆಗಳಲ್ಲಿ ಘನೀಕೃತ ವೀರ್ಯ ಬಳಸಿ ಸಂತಾನೋತ್ಪತ್ತಿಗಾಗಿ (ಎಮ್ಮೆ ಮತ್ತು ಹಸು ಗರ್ಭ ಧರಿಸಲು) ಜಾರಿಯಲ್ಲಿರುವ ವಿಧಾನ

56. (1) ಕೃತಕ ಗರ್ಭಧಾರಣಾ ಕಾರ್ಯಕ್ರಮ
(2) ಕಸಿ ಮಾಡುವಿಕೆ
(3) ಲಸಿಕೆ ಹಾಕುವುದು
(4) ಪಾಶ್ಚರೈಜೇಷನ್

21. ಎನ್.ಆರ್.ಎಚ್.ಎಂ. ನ ಪ್ರಧಾನ ಗುರಿ ಏನು ?

(1) ಅಭಿಯಾನದ ಕಾಲಾವಧಿಯಲ್ಲಿ ಗುರಿಗಳನ್ನು ಸಾಧಿಸುವುದು
(2) ಗರ್ಭಿಣಿ ಮಹಿಳೆಯರ ಸಾವಿನ ಪ್ರಮಾಣವನ್ನು ತಗ್ಗಿಸುವುದು
(3) ಆರೋಗ್ಯ ವ್ಯವಸ್ಥೆಯಲ್ಲಿ ಸುಧಾರಣೆ ಹಾಗೂ ಜನರ ಆರೋಗ್ಯ ಪರಿಸ್ಥಿತಿಗಳಲ್ಲಿ, ಅದರಲ್ಲೂ ಮುಖ್ಯವಾಗಿ ರಾಷ್ಟ್ರದ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವಂಥ ಜನರ ಆರೋಗ್ಯ ಪರಿಸ್ಥಿತಿಗಳಲ್ಲಿ ಸುಧಾರಣೆ ತರುವುದು.
61
(4) ಎಲ್ಲರಿಗೂ ಔಷಧಿ

22. ಕರ್ನಾಟಕದಲ್ಲಿ ಇತ್ತೀಚೆಗಿನ ಸಂತಾನ ಫಲವತ್ತತೆಯ ದರವೇನು ?

58. (1) 2.1 (2) 1.9
(3) 1.3 (4) 1.0

23. ಜೆಎಸ್‌ವೈ ಎಂಬುದರ ಅರ್ಥವೇನು ?

(1) ಜ್ಯೋತಿ ಸಂಜೀವಿನಿ ಯೋಜನೆ
59. (2) ಜೀವನ ಸಂಧ್ಯಾ ಯೋಜನೆ
(3) ಜನನಿ ಸುರಕ್ಷಾ ಯೋಜನೆ
(4) ಜೀವನ ಸಂಜೀವಿನಿ ಯೋಜನೆ

24. ಪಂಚವಾರ್ಷಿಕ ಯೋಜನೆ ಕರ್ತೃ ಪಿತಾಮಹ ಯಾರು ?

(1) ಸರ್ದಾರ್ ವಲ್ಲಭ ಭಾಯಿ ಪಟೇಲ್
60 (2) ಮಹಾತ್ಮ ಗಾಂಧಿ
(3) ಲಾಲ್ ಬಹಾದ್ದೂರ್ ಶಾಸ್ತ್ರಿ
(4) ಪಂಡಿತ್ ಜವಾಹರ್‌ಲಾಲ್ ನೆಹರೂ



www.kpscvaani.com
Scanned by CamScanner

25. ಇವುಗಳಲ್ಲಿ ಯಾವುದು ಸ್ವಯಂ ಉದ್ಯೋಗ ಕಾರ್ಯಕ್ರಮವಾಗಿದೆ ?

(1) ಎಂಜಿಎನ್‌ಆರ್‌ಇಜಿಎ

(2) ಐಆರ್‌ಇಪಿ

(3) ಡಿಪಿಎಪಿ

(4) ಎನ್‌ಆರ್‌ಎಲ್‌ಎಂ

26. ಭಾರತದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಚಟುವಟಿಕೆಯು

(1) ಕೃಷಿ

(2) ಔದ್ಯಮಿಕ ಉತ್ಪಾದನೆ

(3) ಹಣಕಾಸು, ವಿಮೆ, ಭೂಮಿ ಉದ್ಯಮ ಹಾಗೂ ವಾಣಿಜ್ಯ ಸೇವೆಗಳು

(4) ವ್ಯಾಪಾರ, ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳು

27. ಕರ್ನಾಟಕದಲ್ಲಿ ಕನಿಷ್ಠ ತಲಾ ಆದಾಯ ಹೊಂದಿರುವ ಜಿಲ್ಲೆಯೆಂದರೆ

(1) ಯಾದಗಿರಿ

(2) ಚಾಮರಾಜನಗರ

(3) ಚಿಕ್ಕಬಳ್ಳಾಪುರ

(4) ರಾಯಚೂರು

28. ಭಾರತದಲ್ಲಿ ಹಣದುಬ್ಬರವನ್ನು ಅಳೆಯಲು ಬಳಸುವ ಸಾಧನ

(1) ಗ್ರಾಹಕ ಬೆಲೆ ಸೂಚ್ಯಂಕ

(2) ಸಗಟು ಬೆಲೆ ಸೂಚ್ಯಂಕ

(3) ಜೀವನ ವೆಚ್ಚ ಬೆಲೆ ಸೂಚ್ಯಂಕ

(4) ಕೈಗಾರಿಕಾ ಕಾರ್ಮಿಕರಿಗಾಗಿರುವ ಗ್ರಾಹಕ ಬೆಲೆ ಸೂಚ್ಯಂಕ

29. "ನೀತಿ ಆಯೋಗ"ವು ಈ ಕೆಳಗಿನ ಯಾವುದರ ಬದಲಾಗಿ ಸ್ಥಾಪಿತಗೊಂಡಿದೆ ?

(1) ಹಣಕಾಸು ಆಯೋಗ

(2) ನ್ಯಾಯ ಆಯೋಗ

(3) ಯೋಜನಾ ಆಯೋಗ

(4) ವಿದೇಶಿ ವ್ಯಾಪಾರ ಆಯೋಗ

30. ಕರ್ನಾಟಕದಿಂದ ಅತ್ಯಧಿಕವಾಗಿ ರಫ್ತುಗೊಳ್ಳುವ ಸರಕು/ಸೇವೆಗಳೆಂದರೆ

(1) ವಿದ್ಯುನ್ಮಾನ, ತಂತ್ರಾಂಶ ಮತ್ತು ಜೈವಿಕ ತಂತ್ರಜ್ಞಾನ

(2) ಸಿದ್ಧ ಉಡುಪುಗಳು

(3) ರೇಷ್ಮೆ ವಸ್ತುಗಳು

(4) ಇಂಜಿನಿಯರಿಂಗ್ ಸರಕುಗಳು

31. RIDF ನ ಪೂರ್ಣ ರೂಪ

(1) Road Infrastructure Development Fund

(2) Rural Infrastructure Development Fund

(3) Rail Infrastructure Development Fund

(4) Regional Infrastructure Development Fund

32. ಕೆಳಗಿನ ಯಾವುದು ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಉದ್ದೇಶ ಅಲ್ಲ ?

(1) ಅರೆಕುಶಲ ಕಾರ್ಮಿಕರಿಗೆ ಉದ್ಯೋಗ ಒದಗಿಸುವುದು

(2) ಗ್ರಾಮೀಣ ಪ್ರದೇಶಗಳಲ್ಲಿ ದೀರ್ಘ ಬಾಳಿಕೆ ಬರುವ ಸಮುದಾಯ ಆಸ್ತಿಗಳನ್ನು ನಿರ್ಮಿಸುವುದು

(3) ಸ್ವಸಹಾಯ ಸಮೂಹಗಳನ್ನು ಸ್ಥಾಪಿಸಲು ಪ್ರೋತ್ಸಾಹ ನೀಡುವುದು

(4) ನಗರಗಳೆಡೆಗೆ ವಲಸೆ ಹೋಗುವುದನ್ನು ತಪ್ಪಿಸುವುದು



www.kpscvaani.com

Scanned by CamScanner

33. ಒಂದು ಹುಡುಗಿಯು ಒಂದು ಉಯ್ಯಾಲೆಯಲ್ಲಿ ಕುಳಿತಿರುವ ಸ್ಥಿತಿಯಲ್ಲಿ ಉಯ್ಯಾಲೆಯಾಡುತ್ತಿದ್ದಾಳೆ. ಅವಳು ನಿಂತ ಸ್ಥಿತಿಯಲ್ಲಿದ್ದರೆ ತೂಗಾಡುವ ಅವಧಿಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ ?

(1) ಕಾಲಾವಧಿ ಒಂದೇ ಆಗಿರುತ್ತದೆ

(2) ಕಾಲಾವಧಿಯು ಕಡಿಮೆಯಾಗುತ್ತದೆ

(3) ಕಾಲಾವಧಿಯು ಹೆಚ್ಚಾಗುತ್ತದೆ

(4) ಕಾಲಾವಧಿಯು ಅನಿರ್ಧಿಷ್ಟವಾಗುತ್ತದೆ

34. ಈ ಕೆಳಕಂಡವುಗಳಲ್ಲಿ ಯಾವುದು ವಿಕಿರಣಶೀಲ ಪದಾರ್ಥದಿಂದ ಉತ್ಸರ್ಜಿತವಾಗಿರುವುದಿಲ್ಲ ?

(1) ಎಲೆಕ್ಟ್ರಾನ್‌ಗಳು

(2) $\alpha$ ಕಣಗಳು

(3) ನ್ಯೂಟ್ರಾನ್‌ಗಳು

(4) ವಿದ್ಯುತ್-ಕಾಂತೀಯ ವಿಕಿರಣಗಳು

35. ಭೂಮಿಯ ವಾತಾವರಣದ ಓಜೋನ್ ಪದರವು

(1) UV ವಿಕಿರಣಗಳನ್ನು ಹೀರಿಕೊಳ್ಳುತ್ತದೆ

(2) UV ವಿಕಿರಣಗಳು ಭೂಮಿಯನ್ನು ತಲುಪಲು ಅವಕಾಶ ಮಾಡಿಕೊಡುತ್ತದೆ

(3) ಸೂರ್ಯನಿಂದ ಬರುವ ದೀರ್ಘ ತರಂಗ ದೂರ ವಿಕಿರಣಗಳನ್ನು ಹೀರುತ್ತದೆ

(4) ಯಾವುದೇ ವಿಕಿರಣವು ಭೂಮಿಯನ್ನು ತಲುಪಲು ಅವಕಾಶ ನೀಡುವುದಿಲ್ಲ

36. ಈ ಸರಣಿಯ ಮುಂದಿನ ಸಂಖ್ಯೆಯನ್ನು ಕಂಡು ಹಿಡಿಯಿರಿ.

4, 5, 9, 16, 26, ☐

(1) 44 (2) 35

(3) 36 (4) 39

37. ಒಂದು ಸಂಕೇತದಲ್ಲಿ APRIL ಎಂಬುದನ್ನು DSULO ಎಂದು ಬರೆಯಲಾಗಿದೆ. ಹಾಗಿದ್ದರೆ AUGUST ಎಂಬುದನ್ನು ಹೇಗೆ ಬರೆಯಬಹುದು ?

(1) BVHVTU

(2) DXJXVY

(3) DWIWUV

(4) DXJXVW

38. ಒಬ್ಬ ವ್ಯಕ್ತಿಯು 88 ರೂ ಗಳಿಗೆ 80 ಕೆಜಿ ಉಪ್ಪು ಕೊಂಡು ಕೊಂಡು ಅದನ್ನು ಆತ 20 ಕೆಜಿಗೆ ಎಷ್ಟು ಬರುತ್ತೊ ಅಷ್ಟು ಹಣದ ನಷ್ಟದಲ್ಲಿ ಮಾರಬೇಕಾಗಿ ಬಂತು. ಹಾಗಿದ್ದರೆ ಆತ ಉಪ್ಪನ್ನು ಯಾವ ಬೆಲೆಗೆ ಮಾರಿದ ?

(1) ಪ್ರತಿ ಕೆಜಿಗೆ 99 ಪೈಸೆ

(2) ಪ್ರತಿ ಕೆಜಿಗೆ 83 ಪೈಸೆ

(3) ಪ್ರತಿ ಕೆಜಿಗೆ 88 ಪೈಸೆ

(4) ಪ್ರತಿ ಕೆಜಿಗೆ 75 ಪೈಸೆ

39. 40 ಜನರು ಒಂದು ಕೆಲಸವನ್ನು 20 ದಿನಗಳಲ್ಲಿ ಪೂರ್ಣಗೊಳಿಸಬಹುದು. 50 ಜನರು ಈ ಕೆಲಸವನ್ನು ಮುಗಿಸಲು ಎಷ್ಟು ದಿನ ಬೇಕು ?

(1) 12 (2) 15

(3) 16 (4) 18

40. ಒಂದು ದಾರದ ತುಂಡು 40 ಸೆಂಮೀ ಉದ್ದವಿದೆ. ಇದನ್ನು ಮೂರು ತುಂಡುಗಳಾಗಿ ಕತ್ತರಿಸಲಾಗುತ್ತದೆ. ಅತ್ಯಂತ ಉದ್ದದ ತುಂಡು ಮಧ್ಯಮ ಗಾತ್ರದ ತುಂಡಿನ ಮೂರರಷ್ಟು ಹೆಚ್ಚು ಉದ್ದವಿದೆ. ಅತ್ಯಂತ ಚಿಕ್ಕ ತುಂಡು ಅತ್ಯಂತ ಉದ್ದದ ತುಂಡಿಗಿಂತ 23 ಸೆಂಮೀ ಕಡಿಮೆ ಇದೆ. ಅತ್ಯಂತ ಚಿಕ್ಕ ತುಂಡಿನ ಉದ್ದವನ್ನು ಕಂಡು ಹಿಡಿಯಿರಿ.

(1) 4 (2) 3

(3) 9 (4) 6



www.kpscvaani.com

Scanned by CamScanner

41. ಒಬ್ಬ ಅಂಗಡಿಯಾತ 9000 ರೂಗಳಿಗೆ ಒಂದು ರೆಫ್ರಿಜರೇಟರ್‌ನ್ನು ಕೊಂಡು ತಂದ. ಅದರ ಮೇಲೆ 20% ರಿಯಾಯಿತಿ ನೀಡಿದಾಗ ಆತನಿಗೆ 30% ಲಾಭವಾಗುತ್ತದೆ. ಹಾಗಿದ್ದರೆ ರೆಫ್ರಿಜರೇಟರ್‌ನ ಮೇಲೆ ಗುರುತಿಸಿದ್ದ ಬೆಲೆ ಎಷ್ಟು ?

(1) 14,600 ರೂ

(2) 14,625 ರೂ

(3) 14,650 ರೂ

(4) 14,675 ರೂ

42. ಯೂಕಾರಿಯೋಟಿಕ್ ಕೋಶ ಎಂದರೇನು ? (ಜೀವಕಣಗಳಲ್ಲಿ)

(1) ನ್ಯೂಕ್ಲಿಯಸ್ ಇಲ್ಲದಿರುವುದು

(2) ಪ್ರಿಮಿಟೀವ್ ನ್ಯೂಕ್ಲಿಯಸ್

(3) ಟ್ರುನ್ಯೂಕ್ಲಿಯಸ್ (ನಿಜವಾದ ನ್ಯೂಕ್ಲಿಯಸ್)

(4) ಪ್ರಿಮಿಟೀವ್ ಮತ್ತು ಟ್ರುನ್ಯೂಕ್ಲಿಯಸ್ ಎರಡು ಇರುವ ಕೋಶ

43. ಈ ಕೆಳಗಿನವುಗಳಲ್ಲಿ ಯಾವುದು ಕೇಂದ್ರಾಡಳಿತ ಪ್ರದೇಶವಲ್ಲ ?

(1) ಲಕ್ಷದೀಪ

(2) ಗೋವಾ

(3) ದಾದ್ರಾ ಮತ್ತು ನಗರ್ ಹವೇಲಿ

(4) ಅಂಡಮಾನ್ ಮತ್ತು ನಿಕೋಬಾರ್

44. ಈ ಕೆಳಗಿನವುಗಳಲ್ಲಿ ಭಾರತ ಸರ್ಕಾರದ ಯಾವ ಕಾಯ್ದೆಯು ಮೊದಲ ಬಾರಿಗೆ ಕೇಂದ್ರ ಮತ್ತು ರಾಜ್ಯ ಲೋಕ ಸೇವಾ ಆಯೋಗಗಳ ಸ್ಥಾಪನೆಗೆ ಉಪಬಂಧ ಕಲ್ಪಿಸಿತು ?

(1) ಭಾರತ ಸರ್ಕಾರ ಅಧಿನಿಯಮ, 1935

(2) ಭಾರತ ಸರ್ಕಾರ ಅಧಿನಿಯಮ, 1919

(3) ಸ್ವತಂತ್ರ ಭಾರತ ಸಂವಿಧಾನ

(4) ಲೀ ಕಮಿಷನ್

45. ಈ ಕೆಳಗಿನವರಲ್ಲಿ ಯಾರು 'ಜ್ಞಾನಪೀಠ' ಪ್ರಶಸ್ತಿ ಪುರಸ್ಕೃತರಲ್ಲ ?

(1) ಕುವೆಂಪು

(2) ಶಿವರಾಮ ಕಾರಂತ

(3) ಯು.ಆರ್. ಅನಂತಮೂರ್ತಿ

(4) ಪಿ. ಲಂಕೇಶ್

46. ಕರ್ನಾಟಕದಲ್ಲಿ ಬೂಸಾ ಕೋಲಾಹಲವನ್ನು (Bhusa Uproar) ಹುಟ್ಟು ಹಾಕಿದವರು ಯಾರು ?

(1) ಗೋಕಾಕ್ ಚಳುವಳಿ

(2) ಬಿ. ಬಸವಲಿಂಗಪ್ಪ

(3) ದೇವರಾಯ ಇಂಗಳೆ

(4) ದಲಿತ ಸಂಘರ್ಷ ಸಮಿತಿ



www.kpscvaani.com
Scanned by CamScanner

**47.** 2011 ರ ಜನಗಣತಿ ಪ್ರಕಾರ ಭಾರತದಲ್ಲಿ ಲಿಂಗಾ- ನುಪಾತ ಈ ಕೆಳಗಿನವುಗಳಲ್ಲಿ ಯಾವುದು ?

(1) 933 (2) 890
(3) 915 (4) 940

**48.** ಕೆಳಗಿನವುಗಳಲ್ಲಿ ಯಾವುದು ತಪ್ಪು ಹೇಳಿಕೆ- ಯಾಗಿದೆ ?

(1) 'ಎ' ರಕ್ತದ ಗುಂಪು ವ್ಯಕ್ತಿಗಳು 'ಬಿ' ಪ್ರತಿಕಾಯಗಳನ್ನು ಹೊಂದಿರುತ್ತಾರೆ.

(2) 'ಬಿ' ರಕ್ತದ ಗುಂಪು ವ್ಯಕ್ತಿಗಳು 'ಎ' ಪ್ರತಿಕಾಯಗಳನ್ನು ಹೊಂದಿರುತ್ತಾರೆ.

(3) 'ಎಬಿ' ರಕ್ತದ ಗುಂಪು ವ್ಯಕ್ತಿಗಳು 'ಎ' ಪ್ರತಿಜನಕವನ್ನು ಮತ್ತು 'ಬಿ' ಪ್ರತಿಕಾಯವನ್ನು ಹೊಂದಿರುತ್ತಾರೆ.

(4) 'ಓ' ರಕ್ತದ ಗುಂಪು ವ್ಯಕ್ತಿಗಳು 'ಎಬಿ' ಪ್ರತಿಕಾಯಗಳೆರಡನ್ನು ಹೊಂದಿರುತ್ತಾರೆ.

**49.** ಕೆಳಕಂಡ ಮಾಲಿನ್ಯದ ಪ್ರಯುಕ್ತ ಮನುಷ್ಯನ ರಕ್ತದಲ್ಲಿ ಆಮ್ಲಜನಕ ರವಾನಿಸುವ ಸಾಮರ್ಥ್ಯ ಕಡಿಮೆಯಾಗುತ್ತದೆ.

(1) ಕಾರ್ಬನ್ ಡೈಆಕ್ಸೈಡ್ ($CO_2$)

(2) ಕಾರ್ಬನ್ ಮಾನಾಕ್ಸೈಡ್ (CO)

(3) ಸಲ್ಫರ್ ಡೈಆಕ್ಸೈಡ್ ($SO_2$)

(4) ಓಝೋನ್ ($O_3$)

**50.** ನರ ಕೋಶಗಳು ವಿಭಜನೆ ಹೊಂದುವುದಿಲ್ಲ. ಏಕೆಂದರೆ ಇವುಗಳಲ್ಲಿ ______ ಇರುವುದಿಲ್ಲ.

(1) ನ್ಯೂಕ್ಲಿಯಸ್

(2) ಮಧ್ಯಕಾಯ

(3) ಗಾಲ್ಗಿ ಕಾಯ

(4) ಮೈಟೋಕಾಂಡ್ರಿಯ

**51.** ಭೂಮಿಯ ನೀರಿನಲ್ಲಿ ಶೇಕಡ ಎಷ್ಟು ಶುದ್ಧ ನೀರಿರುತ್ತದೆ ?

(1) 10 % (2) 3 %
(3) 1 % (4) 8 %

**52.** ಭಾರತ ಸರ್ಕಾರದಿಂದ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಪಡೆದ ಮೊದಲ ಭಾರತೀಯ ಭಾಷೆ ಯಾವುದು ?

(1) ಹಿಂದಿ (2) ತಮಿಳು
(3) ಸಂಸ್ಕೃತ (4) ಬೆಂಗಾಲಿ

**53.** ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ.

A. ಜಾವಾ i. ಕೆನಡ
B. ಹೊನ್‌ಷು (Honshu) ii. ಇಂಡೋನೇಷಿಯ
C. ವಿಕ್ಟೋರಿಯಾ ದ್ವೀಪ iii. ಆಸ್ಟ್ರೇಲಿಯ
D. ಟಾಸ್ಮಾನಿಯಾ iv. ಜಪಾನ್

| | A | B | C | D |
|---|---|---|---|---|
| (1) | i | iv | ii | iii |
| (2) | iii | ii | i | iv |
| (3) | ii | iv | i | iii |
| (4) | iv | iii | i | ii |

**54.** ಎಲ್ಲ ಕಶೇರುಕಗಳು ಸಾಮಾನ್ಯವಾಗಿ ಈ ಕೆಳಗಿನವುಗಳಲ್ಲಿ ಯಾವುದನ್ನು ಹೊಂದಿರುತ್ತವೆ ?

(1) ಅವು ಶೀತ-ರಕ್ತ ಜೀವಿಗಳಾಗಿರುತ್ತವೆ

(2) ಅವು ಆಂತರಿಕ ಅಸ್ಥಿಪಂಜರ ಹೊಂದಿರುತ್ತವೆ

(3) ಅವು ಬೆನ್ನುಮೂಳೆ ಹೊಂದಿರುತ್ತವೆ

(4) ಅವು ಆಂತರಿಕ ಅಸ್ಥಿಪಂಜರ ಮತ್ತು ಬೆನ್ನುಮೂಳೆಯನ್ನು ಹೊಂದಿರುತ್ತವೆ



www.kpscvaani.com

Scanned by CamScanner

55. ಆಸ್ತಿಯ ಹಕ್ಕನ್ನು ಸಂವಿಧಾನದಿಂದ ತೆಗೆದುಹಾಕಿದ ತಿದ್ದುಪಡಿ ಯಾವುದು ?

(1) 42 ನೇ ತಿದ್ದುಪಡಿ

(2) 44 ನೇ ತಿದ್ದುಪಡಿ

(3) 40 ನೇ ತಿದ್ದುಪಡಿ

(4) 47 ನೇ ತಿದ್ದುಪಡಿ

56. ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ____ ಸಂವಿಧಾನದಿಂದ ತೆಗೆದುಕೊಳ್ಳಲಾಗಿದೆ.

(1) ಅಮೇರಿಕಾ

(2) ಬ್ರಿಟೀಷ್

(3) ಸ್ವಿಡ್ಜರ್ಲೆಂಡ್

(4) ಐರ್ಲೆಂಡ್

57. ಭಾರತದ ಸಂವಿಧಾನದಲ್ಲಿ ಎಷ್ಟು ಮೂಲಭೂತ ಕರ್ತವ್ಯಗಳನ್ನು ನೀಡಲಾಗಿದೆ ?

(1) 10

(2) 12

(3) 11

(4) 16

58. ಸಂಸತ್ತಿನ ಹಣಕಾಸು ಸಮಿತಿಗಳು ____

(1) ಅಂದಾಜು ಸಮಿತಿ

(2) ಸಾರ್ವಜನಿಕ ಲೆಕ್ಕಪತ್ರ ಸಮಿತಿ

(3) ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿ

(4) ಮೇಲಿನ ಎಲ್ಲವೂ

59. ಭಾರತದ ಸಂವಿಧಾನವು ಯಾವುದೇ ವ್ಯಕ್ತಿಯ ಜೀವ ಅಥವಾ ಸ್ವಾತಂತ್ರ್ಯವನ್ನು ಕಾಯ್ದೆಯ ಸರಿಯಾದ ವಿಧಾನವಿಲ್ಲದೇ ಕಸಿದುಕೊಳ್ಳುವಂತಿಲ್ಲ ಎಂದು ಹೇಳುತ್ತದೆ. ಸಂವಿಧಾನದ ಯಾವ ಅನುಚ್ಛೇಧ ಈ ಕುರಿತು ವ್ಯವಹರಿಸುತ್ತದೆ ?

(1) 14 ನೇ ಅನುಚ್ಛೇದ

(2) 16 ನೇ ಅನುಚ್ಛೇದ

(3) 20 ನೇ ಅನುಚ್ಛೇದ

(4) 21 ನೇ ಅನುಚ್ಛೇದ

60. ಬ್ಯಾಂಕ್ ದರವನ್ನು ಯಾರು ನಿರ್ಧರಿಸುತ್ತಾರೆ ?

(1) ಕೇಂದ್ರ ಸರ್ಕಾರ

(2) ಹಣಕಾಸು ಮಂತ್ರಿಮಂಡಲ

(3) ಆರ್‌ಬಿಐ (RBI)

(4) ವಾಣಿಜ್ಯ ಮಂತ್ರಿಮಂಡಲ

61. ವಿಧಾನ ಪರಿಷತ್ತಿನ ಒಟ್ಟು ಸದಸ್ಯರ ಸಂಖ್ಯೆಯು ವಿಧಾನಸಭೆಯ ಒಟ್ಟು ಸದಸ್ಯರ ____ ನ್ನು ಮೀರಕೂಡದು.

(1) 1/2 (2) 3/4

(3) 2/3 (4) 1/3

62. ಭಾರತ ಸಂವಿಧಾನದ ____ ಅನುಚ್ಛೇದವು ಅಸ್ಪ್ರಶ್ಯತೆಯನ್ನು ತೆಗೆದುಹಾಕಿದೆ.

(1) 14 (2) 16

(3) 17 (4) 19

63. ಯಾವ ನದಿಗೆ ಭಾಕ್ರಾ ಅಣೆಕಟ್ಟನ್ನು ಕಟ್ಟಲಾಗಿದೆ ?

(1) ಗಂಗಾ ನದಿ (2) ಸಿಂಧು ನದಿ

(3) ಸಟ್ಲೆಜ್ ನದಿ (4) ಬ್ರಹ್ಮಪುತ್ರ ನದಿ



www.kpscvaani.com

Scanned by CamScanner

64. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ.

| ಪಟ್ಟಿ-A | ಪಟ್ಟಿ-B |
|---|---|
| A. ಪಂಜಾಬ್ | i. ಏಕದಳ ಧಾನ್ಯಗಳು |
| B. ಮಹಾರಾಷ್ಟ್ರ | ii. ತೆಂಗು |
| C. ಕೇರಳ | iii. ಆಲೂಗೆಡ್ಡೆ |
| D. ಉತ್ತರ ಪ್ರದೇಶ | iv. ಸೋನಾಮಸೂರಿ ಅಕ್ಕಿ |

| | A | B | C | D |
|---|---|---|---|---|
| (1) | iv | iii | ii | i |
| (2) | iii | iv | i | ii |
| (3) | ii | iii | iv | i |
| (4) | i | ii | iii | iv |

65. ಭೂಮಿಯ ವಾಯುಮಂಡಲ ಯಾವುದರಿಂದ ಉಷ್ಣಾಂಶ ಪಡೆಯುತ್ತದೆ.

(1) ಸೂರ್ಯನ ಕಿರಣಗಳಿಂದ

(2) ಭೂ ವಿಕಿರಣಗಳಿಂದ

(3) ಭೂಮಿಯ ಅಂತರಾಳದಿಂದ

(4) ಜ್ವಾಲಾಮುಖಿಯಿಂದ

66. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ.

| ಪಟ್ಟಿ-A | ಪಟ್ಟಿ-B |
|---|---|
| A. ಪಳೆಯುಳಿಕೆ ಇಂಧನ | i. ಜಲವಿದ್ಯುತ್ ಶಕ್ತಿ |
| B. ನೀರು | ii. ಕಲ್ಲಿದ್ದಲು, ಪೆಟ್ರೋಲಿಯಂ, ನೈಸರ್ಗಿಕ ಅನಿಲ |
| C. ಭೂಗರ್ಭ ಶಕ್ತಿ | iii. ಪವನ ಶಕ್ತಿ |
| D. ಗಾಳಿ | iv. ಭೂ ಅಂತರಾಳ ಕ್ರಿಯೆಯ ಶಾಖದಿಂದ ಹುಟ್ಟುವ ಶಕ್ತಿ |

| | A | B | C | D |
|---|---|---|---|---|
| (1) | iv | iii | ii | i |
| (2) | iv | i | ii | iii |
| (3) | i | ii | iii | iv |
| (4) | ii | i | iv | iii |

67. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ.

| ಪಟ್ಟಿ-A | ಪಟ್ಟಿ-B |
|---|---|
| A. ಕಾಗೆ ಬಂಗಾರ (ಅಭ್ರಕ) | i. ಅಲ್ಯುಮಿನಿಯಂ ಕೈಗಾರಿಕೆ |
| B. ಬಾಕ್ಸೈಟ್ | ii. ಶಾಖೋತ್ಪನ್ನ ಕೈಗಾರಿಕೆ |
| C. ಮ್ಯಾಂಗನೀಸ್ | iii. ವಿದ್ಯುತ್ ಉಪಕರಣ ಕೈಗಾರಿಕೆ |
| D. ಲಿಗ್ನೈಟ್ | iv. ಉಕ್ಕು ಮಿಶ್ರಲೋಹಗಳ ಕೈಗಾರಿಕೆ |

| | A | B | C | D |
|---|---|---|---|---|
| (1) | iii | ii | i | iv |
| (2) | i | ii | iii | iv |
| (3) | iii | i | iv | ii |
| (4) | iv | iii | ii | i |

68. ಮೈಸೂರನ್ನು ಆಳಿದ ಯಾವ ರಾಜರ ಹೆಸರನ್ನು ಕೃಷ್ಣರಾಜ ಸಾಗರ ಅಣೆಕಟ್ಟೆಗೆ ಇಡಲಾಯಿತು ?

(1) ಕೃಷ್ಣರಾಜ ಒಡೆಯರ್-II

(2) ಕೃಷ್ಣರಾಜ ಒಡೆಯರ್-IV

(3) ಜಯಚಾಮರಾಜ ಒಡೆಯರ್

(4) ಚಾಮರಾಜ ಒಡೆಯರ್-IX

69. ಯಾವ ಪ್ರಸ್ಥಭೂಮಿಯನ್ನು 'ಬಯಲು ಸೀಮೆ' ಎಂದು ಕರೆಯುತ್ತಾರೆ ?

(1) ಮೈಸೂರು ಪ್ರಸ್ಥಭೂಮಿ

(2) ಕರ್ಬಿ-ಮೇಘಾಲಯ ಪ್ರಸ್ಥಭೂಮಿ

(3) ದಖ್ಖನ್ ಪ್ರಸ್ಥಭೂಮಿ

(4) ದಖ್ಖನ್-ಒಡೆಸ್ಸಿ ಪ್ರಸ್ಥಭೂಮಿ



www.kpscvaani.com

Scanned by CamScanner

70. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ.

| ಪಟ್ಟಿ-I (ರೇಲ್ವೆ) | ಪಟ್ಟಿ-II (ಪ್ರಾದೇಶಿಕ ಕಛೇರಿ) |
|---|---|
| A. SWR ನೈರುತ್ಯ ರೈಲ್ವೆ ವಲಯ | i. ಹೊಸ ದಿಲ್ಲಿ |
| B. C.R. ಕೇಂದ್ರ ರೈಲ್ವೆ ವಲಯ | ii. ಚೆನ್ನೈ |
| C. S.R. ದಕ್ಷಿಣ ರೈಲ್ವೆ ವಲಯ | iii. ಹುಬ್ಬಳ್ಳಿ |
| D. N.R. ಉತ್ತರ ರೈಲ್ವೆ ವಲಯ | iv. ಮುಂಬಯಿ |

| | A | B | C | D |
|---|---|---|---|---|
| (1) | ii | iii | iv | i |
| (2) | i | ii | iii | iv |
| (3) | iv | iii | ii | i |
| (4) | iii | iv | ii | i |

71. ಹರಪ್ಪ ನಾಗರೀಕತೆಯ ವ್ಯಾಪ್ತಿಯಲ್ಲಿ ಕೆಳಗಿನ ಯಾವ ಪ್ರದೇಶ/ಪ್ರದೇಶಗಳು ಸೇರಿದ್ದವು ?

a. ಪಂಜಾಬ್, ಸಿಂಧ್, ಬಲೂಚಿಸ್ತಾನ್

b. ಹರಿಯಾಣ, ಉತ್ತರ ಪ್ರದೇಶದ ಪಶ್ಚಿಮ ಭಾಗಗಳು

c. ರಾಜಸ್ತಾನ, ಗುಜರಾತ್

ಕೆಳಗಿನ ಆಯ್ಕೆಗಳಿಂದ ಆಯ್ದು ಸರಿ ಉತ್ತರ ಗುರುತಿಸಿ.

(1) a ಮಾತ್ರ

(2) a ಮತ್ತು b ಮಾತ್ರ

(3) a ಮತ್ತು c ಮಾತ್ರ

(4) a, b ಹಾಗೂ c

72. ಈ ಕೆಳಗಿನ ಯಾವ ಅಂಶ/ಗಳು ಬೌದ್ಧಧರ್ಮದ ಜನಪ್ರಿಯತೆಗೆ ಕಾರಣವಾಯಿತು / ಕಾರಣವಾದವು ?

a. ವೈದಿಕ ಧರ್ಮವು ತುಂಬ ಜಟಿಲಗೊಂಡಿತ್ತಾದ್ದರಿಂದ ಬುದ್ಧನ ಬೋಧೆಗಳ ಸರಳತೆ ಜನರನ್ನು ಆಕರ್ಷಿಸಿತು.

b. ಬುದ್ಧನು ತನ್ನ ತತ್ವಗಳನ್ನು ಜನರ ಭಾಷೆಯಾದ ಪಾಲಿಯಲ್ಲಿ ಬೋಧಿಸಿದನು.

c. ಬೌದ್ಧ ಸಂಘಗಳಲ್ಲಿ ಸ್ತ್ರೀಯರಿಗೂ ಪ್ರವೇಶವಿತ್ತು.

ಕೆಳಗಿನ ಆಯ್ಕೆಗಳಿಂದ ಸರಿ ಉತ್ತರವನ್ನು ಗುರುತಿಸಿರಿ.

(1) a ಮತ್ತು b ಮಾತ್ರ

(2) b ಮಾತ್ರ

(3) b ಹಾಗೂ c ಮಾತ್ರ

(4) a, b ಹಾಗೂ c

73. ಹರ್ಷವರ್ಧನನ ಆಳ್ವಿಕೆಯ ಆರಂಭದ ಇತಿಹಾಸದ ಪ್ರಮುಖ ಆಕರವಾಗಿರುವ 'ಹರ್ಷಚರಿತ' ದ ಕರ್ತೃ ಯಾರು ?

(1) ಬಾಣಭಟ್ಟ (2) ಬಿಲ್ಹಣ

(3) ಭಾಸ (4) ಶೂದ್ರಕ

74. ಉನ್ನತ ವಿದ್ಯೆಯ ಈ ಕೆಳಗಿನ ಯಾವ ಕೇಂದ್ರದ ಬೆಳವಣಿಗೆಯನ್ನು ಹರ್ಷವರ್ಧನನು ಪೋಷಿಸಿದನು ?

(1) ವಿಕ್ರಮಶಿಲಾ (2) ತಕ್ಷಶಿಲಾ

(3) ನಳಂದಾ (4) ಉಜ್ಜೈನ್



www.kpscvaani.com
Scanned by CamScanner

75. ಕಲ್ಯಾಣ ಚಾಲುಕ್ಯರ ಮಾಂಡವೇಶ್ವರ (ಅಧೀನ) ರಾಗಿದ್ದ ರಾಜ ಮನೆತನಗಳು

(1) ಹೊಯ್ಸಳರು, ಕಾಕತೀಯರು, ಪಾಂಡ್ಯರು

(2) ಕಾಕತೀಯರು, ಸೇವುಣರು, ಹೊಯ್ಸಳರು

(3) ಪಾಂಡ್ಯರು, ಸೇವುಣರು, ಕಾಕತೀಯರು

(4) ಪಾಂಡ್ಯರು, ಹೊಯ್ಸಳರು, ಸೇವುಣರು

76. ಅಸಹಕಾರ ಚಳುವಳಿಗೆ ಸಂಬಂಧಿಸಿ ಈ ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿದೆ/ಇವೆ ?

a. ಚಳುವಳಿಯ ಭೌಗೋಳಿಕ ವಿಸ್ತಾರ ರಾಷ್ಟ್ರವ್ಯಾಪ್ತಿಯಾಗಿತ್ತು.

b. ರೈತಾಪಿಗಳು, ಕಾರ್ಮಿಕರು, ಕುಶಲಕರ್ಮಿಗಳು, ವ್ಯಾಪಾರಿಗಳು

ಮತ್ತಿತರ ವೃತ್ತಿ ಸಮುದಾಯಗಳನ್ನು ಚಳುವಳಿ ಸೆಳೆದದ್ದು ಸಾಬೀತಾಯಿತು

c. ಅದರಲ್ಲಿ ಮುಸ್ಲಿಮ್‌ರ ಭಾಗವಹಿಸುವಿಕೆಯ ಪ್ರಮಾಣ ಅದ್ಭುತವಾಗಿತ್ತು.

ಈ ಕೆಳಗಿನ ಆಯ್ಕೆಗಳಿಂದ ಆಯ್ದು ಸರಿ ಉತ್ತರ ಗುರುತಿಸಿ.

(1) a ಮಾತ್ರ

(2) a ಮತ್ತು b ಮಾತ್ರ

(3) b ಮತ್ತು c ಮಾತ್ರ

(4) a, b ಹಾಗೂ c

77. 1930-31 ರ ನಾಗರಿಕ ಅಸಹಕಾರ ಚಳುವಳಿಯ ಪರಿಣಾಮ/ಗಳು ಯಾವುದು/ಯಾವುವು ?

a. ತೆರಿಗೆ ಪಾವತಿಸಲು ನಿರಾಕರಣೆ

b. ವಿದೇಶಿ ಬಟ್ಟೆ ಮತ್ತು ಮದ್ಯದ ಬಹಿಷ್ಕಾರ

c. ಯುವಕರಿಂದ ವ್ಯಾಪಕ ಹಿಂಸಾತ್ಮಕ ಪ್ರತಿಭಟನೆ

ಕೆಳಗಿನ ಆಯ್ಕೆಗಳಿಂದ ಆಯ್ದು ಸರಿ ಉತ್ತರ ಗುರುತಿಸಿ.

(1) a ಮಾತ್ರ

(2) b ಮಾತ್ರ

(3) a ಹಾಗೂ b ಮಾತ್ರ

(4) a, b ಹಾಗೂ c

78. 1919 ರ ಭಾರತ ಸರಕಾರದ ಕಾಯ್ದೆಯ ಕಾರ್ಯವನ್ನು ಅಭ್ಯಸಿಸಲು ನಿಯುಕ್ತವಾದ ಸೈಮನ್ ಆಯೋಗವನ್ನು ಭಾರತದ ರಾಜಕೀಯ ಸಂಘಟನೆಗಳು ಯಾವ ಕಾರಣಕ್ಕೆ /ಕಾರಣಗಳಿಗೆ ಬಹಿಷ್ಕರಿಸಿದವು ?

a. ಸೈಮನ್ ಆಯೋಗವು ಅಖಿಲ ಭಾರತ ಆಯೋಗಕ್ಕೆ ವಿರುದ್ಧವಾಗಿತ್ತು.

b. ಜವಾಬ್ದಾರಿ ಸರಕಾರದ ರಾಷ್ಟ್ರೀಯ ಬೇಡಿಕೆಯನ್ನು ಅದು ಉದಾಸೀನ ಮಾಡಿತು.

c. ಸೈಮನ್ ಆಯೋಗದಲ್ಲಿ ಭಾರತೀಯ ಸದಸ್ಯರಾರೂ ಇರಲಿಲ್ಲ.

ಕೆಳಗಿನ ಆಯ್ಕೆಗಳಿಂದ ಆಯ್ದು ಸರಿ ಉತ್ತರ ಗುರುತಿಸಿ.

(1) a ಮಾತ್ರ

(2) a ಮತ್ತು b ಮಾತ್ರ

(3) b ಮತ್ತು c ಮಾತ್ರ

(4) a, b ಮತ್ತು c



www.kpscvaani.com

Scanned by CamScanner

79. ಭಾರತದ ವಿಭಜನೆಯ ಕೋರಿಕೆಯನ್ನು ಕ್ಯಾಬಿನೆಟ್ ಆಯೋಗವು ಯಾವ ಕಾರಣಕ್ಕೆ/ಕಾರಣಗಳಿಗೆ ತಿರಸ್ಕರಿಸಿತು ?

a. ಕೋಮು ಅಲ್ಪಸಂಖ್ಯಾತರ ಸಮಸ್ಯೆಗಳ ಪರಿಹಾರ ವಿಭಜನೆಯಿಂದ ಸಾಧ್ಯವಿರಲಿಲ್ಲ.

b. ಬಂಗಾಲ ಮತ್ತು ಪಂಜಾಬ್ ಪ್ರಾಂತಗಳ ವಿಭಜನೆ ಅಲ್ಲಿಯ ಜನರ ಆಶೋತ್ತರಗಳಿಗೆ ವ್ಯತಿರಿಕ್ತವಾಗಿರಬಹುದಾಗಿತ್ತು.

c. ಪಂಜಾಬಿನ ವಿಭಜನೆ ಎಂದರೆ ಶಿಖ್ ಸಮುದಾಯದ ವಿಭಜನೆಯೂ ಆಗಿತ್ತು.

ಕೆಳಗಿನ ಆಯ್ಕೆಗಳಿಂದ ಆಯ್ದು ಸರಿ ಉತ್ತರ ಗುರುತಿಸಿ.

(1) a ಮಾತ್ರ

(2) a ಮತ್ತು b ಮಾತ್ರ

(3) a ಮತ್ತು c ಮಾತ್ರ

(4) a, b ಹಾಗೂ c

80. ಈ ಕೆಳಗಿನ ಯಾವ ರಾಜ್ಯದ ರಾಜನು ಪಾಕಿಸ್ತಾನದೊಂದಿಗೆ ಸೇರ್ಪಡೆಗೊಳ್ಳುವ ಬಯಕೆ ಹೊಂದಿದ್ದನು ಆದರೆ ಆದರಲ್ಲಿ ವಿಫಲನಾದನು ?

(1) ಜುನಾಗಢ್

(2) ಹೈದರಾಬಾದ್

(3) ಜಮ್ಮು ಮತ್ತು ಕಾಶ್ಮೀರ

(4) ಟ್ರಾವಂಕೂರ್

81. ಈ ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿದೆ/ಸರಿಯಾಗಿವೆ ?

a. ಪ್ಲಾಸಿಯ ಕದನವು 1775 ರಲ್ಲಿ ನಡೆಯಿತು.

b. ಪ್ಲಾಸಿಯ ಕದನದಲ್ಲಿ ರಾಬರ್ಟ್ ಕ್ಲೈವ್ ನು ಜಯಶಾಲಿಯಾದನು

c. ಬಂಗಾಲ ಮತ್ತು ಬಿಹಾರ್ ಪ್ರಾಂತ್ಯಗಳ ಅಧಿಕಾರವನ್ನು ಗಳಿಸಿದ್ದು, ಬ್ರಿಟಿಷರ ಭೂಸಾಮ್ರಾಜ್ಯ ನಿರ್ಮಾಣದಲ್ಲಿ ಒಂದು ನಿರ್ಣಾಯಕ ಹೆಜ್ಜೆಯಾಗಿತ್ತು.

ಕೆಳಗಿನ ಆಯ್ಕೆಗಳಿಂದ ಆಯ್ದು ಸರಿ ಉತ್ತರ ಗುರುತಿಸಿ.

(1) a ಮಾತ್ರ

(2) b ಮಾತ್ರ

(3) b ಮತ್ತು c ಮಾತ್ರ

(4) a, b ಹಾಗೂ c

82. ಈ ಕೆಳಗಿನ ಯಾವ ಸಂಸ್ಥಾನವು ಡಾಲ್ ಹೌಸಿಯ ದತ್ತು ಮಕ್ಕಳಿಗೆ ಹಕ್ಕಿಲ್ಲ ನಿಯಮದಡಿ ಬ್ರಿಟೀಷ್ ಅಧಿಪತ್ಯಕ್ಕೆ ಒಳಪಡಲಿಲ್ಲ ?

(1) ಸತಾರಾ (2) ಝಾನ್ಸಿ

(3) ಕಿತ್ತೂರು (4) ನಾಗಪುರ

83. ಯಾವ ದಿನವನ್ನು ರಾಷ್ಟ್ರೀಯ ಹೆಣ್ಣು ಮಕ್ಕಳ ದಿನವನ್ನಾಗಿ ಆಚರಣೆ ಮಾಡಲಾಗುತ್ತದೆ ?

(1) ಜನವರಿ-24 (2) ಮಾರ್ಚ್-24

(3) ಜನವರಿ-08 (4) ಮಾರ್ಚ್-08



www.kpscvaani.com

Scanned by CamScanner

**84.** ನಮ್ಮ ಸಂವಿಧಾನದ ಯಾವ ವಿಧಿಯು ಶಾಲಾ ಪೂರ್ವದ (ಬಾಲ್ಯ ಪೂರ್ವ) ಆರು ವರ್ಷಕ್ಕಿಂತ ಕೆಳಗಿನ ಮಕ್ಕಳ ಶಿಕ್ಷಣದ ಮಹತ್ವವನ್ನು ತಿಳಿಸುತ್ತದೆ ?

(1) 21 (ಎ) ವಿಧಿ  (2) 45 ನೇ ವಿಧಿ

(3) 51 (ಎ) ವಿಧಿ  (4) 46 ನೇ ವಿಧಿ

**85.** ಕೆಳಗಿನ ಯಾವ ಹೇಳಿಕೆ ಸರಿಯಾಗಿಲ್ಲ ?

(1) ರಾಜ್ಯಸಭೆಯಲ್ಲಿ ಹಣಕಾಸಿನ ಮಸೂದೆಯನ್ನು ಮೊದಲು ಮಂಡಿಸುವಂತಿಲ್ಲ.

(2) ರಾಜ್ಯಸಭೆಗೆ ಸಂವಿಧಾನ ತಿದ್ದುಪಡಿಯನ್ನು ತಿರಸ್ಕರಿಸುವ ಅಧಿಕಾರವಿಲ್ಲ.

(3) ರಾಜ್ಯಸಭೆಗೆ ಅವಿಶ್ವಾಸ ಗೊತ್ತುವಳಿ ನಿರ್ಣಯವನ್ನು ಅಂಗೀಕರಿಸುವ ಅಧಿಕಾರವಿಲ್ಲ.

(4) ರಾಜ್ಯಸಭೆಯು ಹಣಕಾಸಿನ ಮಸೂದೆಗೆ ಶಿಫಾರಸ್ಸು ಮಾಡುವ ಅಧಿಕಾರವನ್ನು ಪಡೆದಿದೆ.

**86.** ನಿಕೊಟಿನ್ ಆಸಿಡ್ ಕೊರತೆಯು ಮನುಷ್ಯರಲ್ಲಿ ______ ಖಾಯಿಲೆಯನ್ನು ಉಂಟುಮಾಡುತ್ತದೆ.

(1) ಪೆಲೆಗ್ರಾ  (2) ಗಂಟಲು ಮಾರಿ

(3) ಕ್ಯಾನ್ಸರ್  (4) ಅನೀಮಿಯ

**87.** ಪಾಲಕರ ಪೋಷಣೆ, ಸಂರಕ್ಷಣೆ, ಹಾಗೂ ಹಿರಿಯ ನಾಗರಿಕರ ರಕ್ಷಣಾ ಕಾಯ್ದೆ 2007 ರಡಿ, ಈ ಕೆಳಗಿನ ಯಾವ ವಯಸ್ಸಿನವರನ್ನು ಹಿರಿಯ ನಾಗರಿಕರು ಎಂದು ಪರಿಗಣಿಸಲಾಗಿದೆ ?

(1) 58 ವರ್ಷ ಹಾಗೂ ಅದಕ್ಕಿಂತ ಹೆಚ್ಚು

(2) 65 ವರ್ಷ ಹಾಗೂ ಅದಕ್ಕಿಂತ ಹೆಚ್ಚು

(3) 70 ವರ್ಷ ಹಾಗೂ ಅದಕ್ಕಿಂತ ಹೆಚ್ಚು

(4) 60 ವರ್ಷ ಹಾಗೂ ಅದಕ್ಕಿಂತ ಹೆಚ್ಚು

**88.** ವಿಕಲಚೇತನರ ಸಬಲೀಕರಣಕ್ಕಾಗಿ ಭಾರತ ಸರ್ಕಾರವು ರಾಷ್ಟ್ರೀಯ ದೃಷ್ಟಿದೋಷ ಸಂಸ್ಥೆಯನ್ನು ಎಲ್ಲಿ ಸ್ಥಾಪಿಸಿರುತ್ತದೆ ?

(1) ಕೋಲ್ಕತ್ತ  (2) ಮುಂಬೈ

(3) ಕಟಕ್  (4) ಡೆಹರಾಡೂನ್

**89.** ಈ ಕೆಳಗಿನವುಗಳಲ್ಲಿ ಯಾವುದು ಅಖಿಲ ಭಾರತ ಸೇವೆಯಲ್ಲ ?

(1) ಭಾರತೀಯ ಆಡಳಿತಾತ್ಮಕ ಸೇವೆ

(2) ಭಾರತೀಯ ಪೊಲೀಸ್ ಸೇವೆ

(3) ಭಾರತೀಯ ಅರಣ್ಯ ಸೇವೆ

(4) ಭಾರತೀಯ ವಿದೇಶೀ ಸೇವೆ

**90.** ಕೆಳಗಿನ ಯಾವ ತಿದ್ದುಪಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಎರಡು ಪ್ರತ್ಯೇಕವಾದ ಹಾಗೂ ಸ್ವತಂತ್ರವಾದ ಆಯೋಗಗಳಿಗೆ ಅವಕಾಶ ಕಲ್ಪಿಸಿತು ?

(1) 86 ನೆಯ ತಿದ್ದುಪಡಿ ಕಾಯಿದೆ

(2) 85 ನೆಯ ತಿದ್ದುಪಡಿ ಕಾಯಿದೆ

(3) 89 ನೆಯ ತಿದ್ದುಪಡಿ ಕಾಯಿದೆ

(4) 90 ನೆಯ ತಿದ್ದುಪಡಿ ಕಾಯಿದೆ

**91.** ಭಾರತದ ಅಟಾರ್ನಿ ಜನರಲ್ ರಿಗೆ

(1) ಎಲ್ಲ ಉಚ್ಚ ನ್ಯಾಯಾಲಯಗಳಲ್ಲಿ ಮಾತ್ರ ಹಾಜರಾಗುವ ಹಕ್ಕು ಇದೆ.

(2) ಭಾರತದಲ್ಲಿಯ ಎಲ್ಲ ನ್ಯಾಯಾಲಯಗಳಲ್ಲಿ ಮಾತ್ರ ಹಾಜರಾಗುವ ಹಕ್ಕು ಇದೆ.

(3) ಕೇವಲ ಸರ್ವೋಚ್ಚ ನ್ಯಾಯಾಲಯದಲ್ಲಿ ಹಾಜರಾಗುವ ಹಕ್ಕು ಇದೆ.

(4) ಸಂಸತ್ತಿನಲ್ಲಿ ಮಾತ್ರ ಹಾಜರಾಗುವ ಹಕ್ಕು ಇದೆ.



www.kpscvaani.com

Scanned by CamScanner

92. ಕೆಳಗಿನ ಕಾಯಿದೆಗಳಲ್ಲಿ ಯಾವುದು ಮೂರು ಪಟ್ಟಿಗಳ-ಸಂಯುಕ್ತ, ಪ್ರಾಂತೀಯ ಮತ್ತು ಸಮವರ್ತಿ ಅಧಿಕಾರ ವಿಭಜನೆಗೆ ಅವಕಾಶ ಮಾಡಿಕೊಟ್ಟಿತ್ತು ?

(1) 1935 ರ ಭಾರತ ಸರ್ಕಾರ ಕಾಯಿದೆ

(2) 1909 ರ ಭಾರತ ಕೌನ್ಸಿಲ್ಸ್ ಕಾಯಿದೆ

(3) 1919 ರ ಭಾರತ ಸರ್ಕಾರ ಕಾಯಿದೆ

(4) 1892 ರ ಭಾರತ ಕೌನ್ಸಿಲ್ಸ್ ಕಾಯಿದೆ

93. ಒಂದು ಮಸೂದೆ ಹಣಕಾಸಿನ ಮಸೂದೆಯೇ ಎಂದು ಯಾರು ನಿರ್ಣಯಿಸುತ್ತಾರೆ ?

(1) ಹಣಕಾಸಿನ ಸಚಿವ

(2) ಸ್ಪೀಕರ್

(3) ರಾಷ್ಟ್ರಪತಿ

(4) ಪ್ರಧಾನಮಂತ್ರಿ

94. ಆಮ್ಲಮಳೆಗೆ ಮುಖ್ಯ ಕಾರಣ

(1) ನೀರಿನ ಮಾಲಿನ್ಯ

(2) ವಾಯು ಮಾಲಿನ್ಯ

(3) ಮಣ್ಣಿನ ಮಾಲಿನ್ಯ

(4) ಮೇಲಿನ ಎಲ್ಲವೂ

95. ಭೋಪಾಲ್ ಅನಿಲ ದುರಂತಕ್ಕೆ ಕಾರಣವಾದ ಅನಿಲ ಯಾವುದು ?

(1) ಮೀಥೇನ್

(2) ಮಿಥೈಲ್ ಐಸೊಸಯನೇಟ್

(3) ಗಂಧಕದ ಡಯಾಕ್ಸೈಡ್

(4) ಎಲ್ಲವೂ

96. ಅಪಾಯದಲ್ಲಿರುವ ಪ್ರಭೇದಗಳನ್ನು ಈ ಕೆಳಗಿನ ಪುಸ್ತಕದಲ್ಲಿ ದಾಖಲಿಸಲಾಗುತ್ತದೆ.

(1) ರೆಡ್ ಡೇಟಾ ಬುಕ್

(2) ಎಲ್ಲೊ ಡೇಟಾ ಬುಕ್

(3) ಹರ್ಬೇರಿಯಂ

(4) ಗ್ರೀನ್ ಡೇಟಾ ಬುಕ್

97. ಭತ್ತದ ಗದ್ದೆಯ ಮೂಲದಿಂದಾಗುವ ಮುಖ್ಯ ಮಾಲಿನ್ಯಕಾರಕ

(1) $CO$ (2) $CO_2$

(3) $CH_4$ (4) $HNO_3$

98. ಕಾಜಿರಂಗ ರಾಷ್ಟ್ರೀಯ ಉದ್ಯಾನವು ಯಾವುದಕ್ಕೆ ಪ್ರಸಿದ್ಧ ?

(1) ಭಾರತದ ಘೇಂಡಾಮೃಗ

(2) ಆನೆ

(3) ಕರಡಿಗಳು

(4) ಹುಲಿ

99. ಸುಂದರಬನದಲ್ಲಿ _____ ವಿಧದ ಅರಣ್ಯವಿದೆ.

(1) ಮ್ಯಾನ್‌ಗ್ರೋವ್

(2) ಎಲೆ ಉದುರುವ ಕಾಡು

(3) ಕುರುಚಲು ಕಾಡು

(4) ನಿತ್ಯ ಹರಿದ್ವರ್ಣ

100. ವಾತಾವರಣದ ತಾಪಮಾನ ಈ ಕೆಳಕಂಡ ಯಾವ ವಿಭಾಗದಲ್ಲಿ ಕಡಿಮೆಯಾಗುತ್ತದೆ ?

(1) ಭೂಮಿಯಿಂದ ಸ್ಟ್ರಾಟೊಪಾಸ್‌ವರೆಗೆ

(2) ಸ್ಟ್ರಾಟೊಪಾಸ್‌ನಿಂದ ಮೀಸೊಪಾಸ್‌ನವರೆಗೆ

(3) ಮೀಸೋಪಾಸ್‌ನಿಂದ ಥರ್ಮೋಸ್ಪಿಯರ್‌ನವರೆಗೆ

(4) ಥರ್ಮೋಸ್ಪಿಯರ್‌ನಿಂದ ಐಯೋನೊಸ್ಪಿಯರ್‌ನವರೆಗೆ



www.kpscvaani.com

Scanned by CamScanner